ನೈವೇದ್ಯವ ಕೊಳ್ಳೊ ನಾರಾಯಣಸ್ವಾಮಿ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page no. 122.
2. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page no. 141.
3. **Note:** Lyrics given without highlights are as per Ref. 1. The wordings in Ref. 2 are similar to Ref. 1 except few wordings which are given in yellow highlights.
4. **Note:** These lyrics are not available in the books of Pavanje Guru Rao
5. **Note:** Singer has followed lyrics as in Ref. 2.

ರಾಗ ಆನಂದ ಭೈರವಿ ಆದಿ ತಾಳ

ನೈವೇದ್ಯವ ಕೊಳ್ಳೊ ನಾರಾಯಣ ಸ್ವಾಮಿ
ದಿವ್ಯ ಷಡುರಸಾನ್ನವ ನಿಟ್ಟೆನೋ ಸ್ವಾಮಿ ॥ ಪ ॥

ಘಮ ಘಮಿಸುವ ಶಾಲ್ಯನ್ನ ಪಂಚಭಕ್ಷ್ಯ
ಅಮೃತ ಕೂಡಿದ ದಿವ್ಯ ಪರಮಾನ್ನವೋ
ರಮಾ ದೇವಿಯು ಸ್ವ ಹಸ್ತದಿ ಮಾಡಿದ ಪಾಕ
ಭೂಮಿ ಮೊದಲಾದ ದೇವಿಯರ (ಸಹಿತ ತಾನು) (ಸಹಿತೌತಣ) ॥ 1 ॥

ಅರವತ್ತು ಶಾಕ ಲವಣಶಾಕ ಮೊದಲಾದ
ಸರಸ ಮೊಸರು ಬುತ್ತಿ ಚಿತ್ರಾನ್ನವೋ
ಪರಮ ಮಂಗಳ ಅಪ್ಪಾವು ಅತಿರಸ
ಹರುಷದಿಂದಲಿ ಇಟ್ಟ ಹೊಸ ತುಪ್ಪವೋ ॥ 2 ॥

ವಡೆಯಂಬೊಡೆಯು ದಧಿ ವಡೆಯು ತಿಂಥಿಣಿ
(ಒಡೆಯನೆ ಬಡಿಸಿದೆ ಅಧಿಕವಾಗಿ) (ಒಡೆಯ ಎಡೆಗೆ ಒಡನೆ ಬಡಿಸಿದೆ)
ದೃಢವಾದ ಪದಾರ್ಥಗಳನೆಲ್ಲ ಇಡಿಸಿದೆ
ಒಡೆಯ ಶ್ರೀ ಪುರಂದರ (ವಿಠಲ ನೀನುಣ್ಣೋ) (ವಿಠಲನೆ ಉಣ್ಣೋ) ॥ 3 ॥

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:

ಷಡುರಸ – ಆರು ರಸಗಳು (ಷಡ್ರಸ); ಸಿಹಿ, ಉಪ್ಪು, ಖಾರ, ಕಹಿ, ಒಗರು, ಹುಳಿ.

ಶಾಲ್ಯಾನ್ನ – ಅಕ್ಕಿ ಅನ್ನ.

ಪಂಚಭಕ್ಷ್ಯ – ಭಕ್ಷ್ಯ, ಭೋಜ್ಯ, ಲೇಹ್ಯ, ಚೋಷ್ಯ, ಪಾನೀಯ; ಅತಿರಸ, ಹೋಳಿಗೆ, ಲಡ್ಡು, ಜಿಲೇಬಿ, ಅಪೂಪ.

ಶಾಕ – ತರಕಾರಿ.

ಲವಣಶಾಕ – ಉಪ್ಪಿನಕಾಯಿ, ಬಾಳಕ

ಪರಮಾನ್ನ = ಪಾಯಸ

ಚಿತ್ರಾನ್ನ = ಕಲಸನ್ನ

ಅಪ್ಪಾಲು = ಸವಿಯಾದ ಹುದುವನ್ನು ಹಾಕಿ ಮಾಡಿದ ಚಿಕ್ಕ ಹೋಳಿಗೆ

ಅತಿರಸ = ಅನಾರಸ

ದಧಿವಡೆ = ಮೊಸರು ವಡೆ

ತಿಂಥಿಣಿ = ರಾಶಿ, ಗುಂಪು

ಪಡಿಪದಾರ್ಥ = ಊಟದ ಸಲುವಾಗಿ ಕೊಡುವ ಸಿದ್ದ ಪದಾರ್ಥಗಳು

Classification: Keerthane
Ankita: sri purandara vittala
Location: NA
Category: Pooja Tatva
Sub-Category: naivedya, Narayana, divya, amruta, ramaa, devi, kai, bhumi, mangala, santosha, oota,
Pravachana: NA
Explanation: NA